**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹರಿಹರ**

ಓ.ಎಸ್.ನಂ. 66/2021 ಪಿ.ಡಬ್ಲ್ಯೂ -2

ಸಾಕ್ಷಿಯನ್ನು ದಿನಾಂಕ: 24.06.2023 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜೆ ಎನ್ ವಿ ವಕೀಲರಿಂದಃ**

ನನಗೆ ಒಟ್ಟು 5-6 ಎಕರೆ ಜಮೀನು ಇರುತ್ತದೆ. ನನ್ನ ಜಮೀನಿನ ಸ.ನಂ.33 ಆಗಿರುತ್ತದೆ. ಸದರಿ ಜಮೀನುಗಳು ಕುಂಬಳೂರು ಗ್ರಾಮದಲ್ಲಿ ಬರುತ್ತವೆ. ಸ.ನಂ.79 ರ ಜಮೀನಿನಿಂದ ನಮ್ಮ ಜಮೀನು ಸ.ನಂ.33 ಸುಮಾರು ಅರ್ಧ ಕಿ.ಮೀ. ದೂರದಲ್ಲಿದೆ. ಸ.ನಂ.79 ರಲ್ಲಿ ಒಟ್ಟು ಎಷ್ಟು ಎಕರೆ ಜಮೀನು ಇರುತ್ತದೆ ಎಂದು ನನಗೆ ಮಾಹಿತಿ ಇಲ್ಲ. ಸ.ನಂ.79 ರ ಅಕ್ಕಪಕ್ಕದಲ್ಲಿ ನನಗೆ ಸಂಬಂಧಿಸಿದ ಯಾವುದೇ ಜಮೀನುಗಳು ಇರುವುದಿಲ್ಲ. ಸ.ನಂ.79 ರ ಜಮೀನಿಗೆ ಲಗತ್ತಾಗಿ ಬೇರೆಯವರ ಜಮೀನು ಇರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಬೇರೆಯವರ ಜಮೀನುಗಳಲ್ಲಿ ಕೂಲಿ ಕೆಲಸ ಮಾಡುವುದಿಲ್ಲ. ಸ.ನಂ.79 ರ ಜಮೀನಿಗೆ ಸಂಬಂಧಪಟ್ಟಂತೆ ಯಾವ ಯಾವ ವ್ಯವಹಾರಗಳು ಆಗಿರುತ್ತವೆ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ಸ.ನಂ.79 ರ ಜಮೀನಿಗೆ ಸಂಬಂಧಪಟ್ಟಂತೆ ಎಷ್ಟು ಜನ ಮಾಲೀಕರು ಇರುತ್ತಾರೆ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಸರ್ವೇ ಇಲಾಖೆಗೆ ಹೋಗಿ ಸ.ನಂ.79 ರ ಜಮೀನಿಗೆ ಸಂಬಂಧಪಟ್ಟಂತೆ ಯಾವುದೇ ದಾಖಲೆಗಳನ್ನು ತೆಗೆಸಿ ನೋಡಿರುವುದಿಲ್ಲ.

ವಾದಿಯು ನನಗೆ ಸುಮಾರು 20-30 ವರ್ಷಗಳಿಂದ ಪರಿಚಯ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ ಸರ್ವೇ ಇಲಾಖೆಯವರು ಪಕ್ಕದ ಜಮೀನುಗಳ ಮಾಲೀಕರಿಗೆ ನೋಟೀಸ್ ಕೊಟ್ಟಿರುವ ಬಗ್ಗೆ ನಾನು ನೋಡಿ ತಿಳಿದುಕೊಂಡಿರುವುದಿಲ್ಲ. ಸದರಿ ನೋಟೀಸ್ ನ ಬಗ್ಗೆ ವಾದಿಯವರು ನನಗೆ ಹೇಳಿರುತ್ತಾರೆ. ಅದೇ ರೀತಿ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿದಂತೆ ಸನಂ.79 ಕ್ಕೆ ಸಂಬಂಧಪಟ್ಟಂತೆ ಆದ ವ್ಯವಹಾರಗಳ ಬಗ್ಗೆ ವಾದಿಯರು ಹೇಳಿರುತ್ತಾರೆ. ಸದರಿ ಎಲ್ಲಾ ವಿಚಾರಗಳನ್ನು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವಾದಿಯರು ಹೇಳಿ ಬರೆಸಿದ ನಂತರ ಅವರ ವಿನಂತಿ ಮೇರೆಗೆ ನಾನು ಪ್ರಮಾಣ ಪತ್ರಕ್ಕೆ ಸಹಿ ಹಾಕಿರುತ್ತೇನೆ ಸ.ನಂ. 79 ರಲ್ಲಿ ಚಾನಲ್ ಇದ್ದು, ಚಾನಲ್ ದಾರಿ ಸಹ ಇರುತ್ತದೆ. ಸದರಿ ಚಾನಲ್ ನ್ನು ನಾನು ನೋಡಿರುತ್ತೇನೆ. ಸದರಿ ಚಾನಲ್ ನ ಅಗಲ ಮತ್ತು ಆಳದ ಬಗ್ಗೆ ನನಗೆ ಹೇಳಲು ಆಗುವುದಿಲ್ಲ. ಅದೇ ರೀತಿ ಸ.ನಂ.79 ರಲ್ಲಿ ಚಾನಲ್ ಗಾಗಿ ಎಷ್ಟು ವಿಸ್ತೀರ್ಣ ಜಮೀನನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಅದೇ ರೀತಿ ಸದರಿ ಸ.ನಂ.79 ರಲ್ಲಿ ಯಾರಿಗೆ ಸಂಬಂಧಿಸಿದ ಎಷ್ಟು ಗುಂಟೆ ಜಮೀನು

ಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಸ.ನಂ.79 ರ ಅಳತೆ ಕಾಲಕ್ಕೆ ನಾನು ಹಾಜರಿದ್ದೆ. ಆ ಸಮಯದಲ್ಲಿ ನಾನು ಹಾಜರಿದ್ದ ಬಗ್ಗೆ ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸುವ ಪೂರ್ವದಲ್ಲಿ ನಾನು ಸರ್ವೇ ಇಲಾಖೆಗೆ ಹೋಗಿ ಸದರಿ ದಿನ ಹಾಜರಿದ್ದ ಬಗ್ಗೆ ದಾಖಲೆಯನ್ನು ಪಡೆಯಲು ಪ್ರಯತ್ನಿಸಿರುವುದಿಲ್ಲ. ನಾನು ವಾದಿಯ ಜೊತೆ ಸೇರಿ ಈ ಪ್ರಕರಣವನ್ನು ದಾಖಲಿಸಿರುವುದಿಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹರಿಹರ